# National
# Kannada
# 15.09.2026 19.35 hrs

ಆಕಾಶವಾಣಿ, ಬೆಂಗಳೂರು

ರಾಷ್ಟ್ರೀಯ ವಾರ್ತೆಗಳು

<u>ಮುಖ್ಯಾಂಶಗಳು</u>

1. ಕಣ್ಣೊರೆಸುವ ತಂತ್ರ ಬಿಟ್ಟು ಉಗ್ರರ ವಿರುದ್ಧ ನಿರ್ದಿಷ್ಟ ಕ್ರಮ ಕೈಗೊಳ್ಳುವಂತೆ ಪಾಕಿಸ್ತಾನಕ್ಕೆ ಭಾರತ ಆಗ್ರಹ

2. ಯಮುನಾ ನದಿಯ ಪುನರುಜ್ಜೀವನಕ್ಕಾಗಿ ಕಿಶೌ ಅಣೆಕಟ್ಟು ನಿರ್ಮಾಣ ಒಪ್ಪಂದಕ್ಕೆ ಆರು ರಾಜ್ಯಗಳು ಸಹಿ

3. ಉತ್ತರಾಖಂಡದಲ್ಲಿ ಇಂದಿನಿಂದ ಭಾರತ-ಅಮೆರಿಕ ನಡುವಿನ ೨೨ನೇ ಜಂಟಿ ಸಮರಾಭ್ಯಾಸ 'ಯುದ್ಧ್ ಅಭ್ಯಾಸ್' ಆರಂಭ

4. ಟಿ-೨೦ ಕ್ರಿಕೆಟ್: ಅಫ್ಘಾನಿಸ್ತಾನ ವಿರುದ್ಧ ಟಾಸ್ ಗೆದ್ದ ಭಾರತ ಫೀಲ್ಡಿಂಗ್ ಆಯ್ಕೆ

<><><><>

ನವದೆಹಲಿಯಲ್ಲಿನ ೧೮ನೇ ಬ್ರಿಕ್ಸ್ ಸಭೆಯಲ್ಲಿ ಪ್ರಧಾನಮಂತ್ರಿ ನರೇಂದ್ರ ಮೋದಿ ಮತ್ತು ಚೀನಾ ಅಧ್ಯಕ್ಷ ಕ್ಸಿ ಜಿನ್ ಪಿಂಗ್ ಅವರ ನಡುವೆ ಹಲವಾರು ಮಹತ್ವದ ವಿಷಯಗಳು ಚರ್ಚೆಯಾಗಿದೆ ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯದ ವಕ್ತಾರ ರಣಧೀರ್ ಜೈಸ್ವಾಲ್ ಹೇಳಿದ್ದಾರೆ. ಎರಡೂ ದೇಶಗಳು ಪರಸ್ಪರ ಮೂರು ಪ್ರಮುಖ ಅಂಶಗಳಾದ ಪರಸ್ಪರ ಗೌರವ, ಪರಸ್ಪರ ಆಸಕ್ತಿ ಮತ್ತು ಪರಸ್ಪರ ಸೂಕ್ಷ್ಮತೆಯಿಂದ ನಡೆದುಕೊಳ್ಳಬೇಕು ಎಂಬುದರ ಬಗ್ಗೆ ಚರ್ಚಿಸಲಾಗಿದೆ ಎಂದರು. ಓಮನ್ ತೀರದಲ್ಲಿ ಭಾರತೀಯ ವಾಣಿಜ್ಯ ನೌಕೆ ಮೇಲೆ ನಡೆದ ದಾಳಿಯ ಬಗೆಗಿನ ಪ್ರಶ್ನೆಗೆ ಉತ್ತರಿಸಿದ ಜೈಸ್ವಾಲ್, ಭಾರತದ ಯಾವುದೇ ವಾಣಿಜ್ಯ ನೌಕೆ ಸುರಕ್ಷಿತ ನೌಕಾಯಾನ, ನಾಗರಿಕರ ಮೇಲೆ ಅಥವಾ ನಾಗರಿಕ ಸೌಲಭ್ಯಗಳ ಮೇಲೆ ನಡೆಯುವ ಯಾವುದೇ ದಾಳಿಯನ್ನು ಭಾರತ ಒಪ್ಪುವುದಿಲ್ಲ. ಅಂತಾರಾಷ್ಟ್ರೀಯ ಜಲಮಾರ್ಗಗಳಲ್ಲಿ ಈ ಹಿಂದಿನಂತೆ ಶಾಂತಿಯುತವಾಗಿ ವಾಣಿಜ್ಯ ವ್ಯವಹಾರಗಳನ್ನು ನಡೆಸಲು ಭಾರತ ಒತ್ತಾಯಿಸುತ್ತದೆ ಎಂದು ಹೇಳಿದರು. ಓಮನ್ ತೀರದಲ್ಲಿ ದಾಳಿಗೊಳಗಾದ ನೌಕೆಯ ಮೇಲೆ ಪನಾಮ ದೇಶದ ಧ್ವಜವಿದ್ದು, ೧೪ ಮಂದಿ ಭಾರತೀಯರು ಈ ನೌಕೆಯಲ್ಲಿದ್ದರು. ದಾಳಿಯ ನಡುವೆಯೂ ೧೩ ಭಾರತೀಯರನ್ನು ರಕ್ಷಿಸಿದ್ದು, ಒಬ್ಬ ಭಾರತೀಯ ಕಾಣೆಯಾಗಿದ್ದಾರೆ. ಭಾರತೀಯ ರಾಯಭಾರ ಕಚೇರಿ ನಿಕಟವಾಗಿ ಈ ಘಟನೆಯನ್ನು ನಿರ್ವಹಿಸುತ್ತಿದೆ ಎಂದು ಅವರು ತಿಳಿಸಿದರು. ಜೈಶ್-ಇ-ಮೊಹಮ್ಮದ್ ಸಂಘಟನೆಯ ಮುಖ್ಯಸ್ಥ ಮಸೂದ್ ಅಜರ್ ತಲೆಯ ಮೇಲೆ ಪಾಕಿಸ್ತಾನ ಸರ್ಕಾರ ೭೦ ಲಕ್ಷ ಪಾಕಿಸ್ತಾನಿ ರೂಪಾಯಿ ಬಹುಮಾನ ಘೋಷಿಸಿರುವ ಬಗೆಗೆ ಕೇಳಲಾದ ಪ್ರಶ್ನೆಗೆ ಪ್ರತಿಕ್ರಿಯಿಸಿದ ರಣಧೀರ್ ಜೈಸ್ವಾಲ್, ಇಂತಹ ಕಣ್ಣೊರೆಸುವ

ಪಾಕಿಸ್ತಾನದ ತಂತ್ರಗಳು ಭಾರತಕ್ಕೆ ಹೊಸದೇನಿಲ್ಲ. ಇಂತಹ ಘೋಷಣೆಗಳನ್ನು ಮಾಡುವ ಬದಲು ಪಾಕಿಸ್ತಾನ ಉಗ್ರರ ವಿರುದ್ಧ ನಿರ್ದಿಷ್ಟ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಒತ್ತಾಯಿಸಿದ್ದಾರೆ.

<><><>

ಜಾಗತಿಕ ಮಟ್ಟದಲ್ಲಿ ವೃದ್ಧಿಸುತ್ತಿರುವ ಭಾರತದ ಪಾತ್ರವನ್ನು ಆಸ್ಟ್ರೇಲಿಯಾ ರಾಯಭಾರಿ ಫಿಲಿಪ್ ಗ್ರೀನ್ ಶ್ಲಾಘಿಸಿದ್ದಾರೆ. ಬ್ರಿಕ್ಸ್ ಸಮಿತಿಯ ವೇದಿಕೆಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಭಾರತ-ಆಸ್ಟ್ರೇಲಿಯಾ ನಡುವಿನ ವ್ಯವಸಾಯ, ತಂತ್ರಜ್ಞಾನ ಮತ್ತು ಆರೋಗ್ಯ ಸೇವೆಗಳ ಪರಸ್ಪರ ಸಹಕಾರಕ್ಕೆ ಇರುವ ಅವಕಾಶಗಳ ಬಗ್ಗೆ ಗಮನ ಸೆಳೆದರು. ಆಸ್ಟ್ರೇಲಿಯಾ, ಬ್ರಿಕ್ಸ್ ದೇಶಗಳ ಗುಂಪಿನಲ್ಲಿ ಇಲ್ಲದಿದ್ದರೂ ಭಾರತ ಸೇರಿದಂತೆ ಬ್ರಿಕ್ಸ್ ಸದಸ್ಯ ರಾಷ್ಟ್ರಗಳ ಪಾತ್ರವನ್ನು ಗೌರವಿಸುತ್ತದೆ. ಭಾರತ ಜಾಗತಿಕ ಮಟ್ಟದಲ್ಲಿ ದೈತ್ಯ ಶಕ್ತಿಯಾಗಿ ಬೆಳೆದಿದೆ. ಅಲ್ಲದೇ ಭಾರತ-ಆಸ್ಟ್ರೇಲಿಯಾ ನಡುವಿನ ಬಾಂಧವ್ಯ ದ್ವಿಪಕ್ಷೀಯ ಮಾತುಕತೆಗಳ ಮೂಲಕ ವೃದ್ಧಿಸುತ್ತಿದೆ ಎಂದು ಹೇಳಿದರು.

<><><>

ಸಂಘರ್ಷಗಳು ಮತ್ತು ವೈರುಧ್ಯಗಳಿಂದ ಕೂಡಿದ ಜಗತ್ತಿನಲ್ಲಿ, ನವದೆಹಲಿಯಲ್ಲಿ ನಡೆದ ಯಶಸ್ವಿ ಬ್ರಿಕ್ಸ್ ಶೃಂಗಸಭೆಯು ಅತ್ಯಂತ ಗಮನಾರ್ಹವಾಗಿದೆ ಎಂದು ಉಪರಾಷ್ಟ್ರಪತಿ ಸಿ.ಪಿ.ರಾಧಾಕೃಷ್ಣನ್ ಹೇಳಿದ್ದಾರೆ. ನವದೆಹಲಿಯಲ್ಲಿ 'ಇಂಡಿಯನ್ ಕೌನ್ಸಿಲ್ ಆಫ್ ವರ್ಲ್ಡ್ ಅಫೇರ್ಸ್'ನ ರಜತ ಮಹೋತ್ಸವ ಸಮಾರಂಭ ಉದ್ದೇಶಿಸಿ ಮಾತನಾಡಿದ ಅವರು, ಸರ್ವಾನುಮತದಿಂದ ಅಂಗೀಕರಿಸಲ್ಪಟ್ಟ 'ನವದೆಹಲಿ ಘೋಷಣೆ'ಯು ಒಂದು ಪ್ರಮುಖ ಸಾಧನೆ ಎಂದು ಶ್ಲಾಘಿಸಿದ್ದಾರೆ. ೨೦೪೭ರ ವೇಳೆಗೆ 'ವಿಕಸಿತ ಭಾರತ'ದ ಗುರಿ ಸಾಧಿಸುವಲ್ಲಿ ಇಂಡಿಯನ್ ಕೌನ್ಸಿಲ್ ಆಫ್ ವರ್ಲ್ಡ್ ಅಫೇರ್ಸ್' ಪ್ರಮುಖ ಪಾತ್ರ ವಹಿಸಲಿದೆ ಎಂದು ಅವರು ಅಭಿಪ್ರಾಯಪಟ್ಟಿದ್ದಾರೆ. ಈ ಸಂದರ್ಭದಲ್ಲಿ ಮಾತನಾಡಿದ ವಿದೇಶಾಂಗ ವ್ಯವಹಾರಗಳ ಸಚಿವ ಡಾ. ಎಸ್.ಜೈಶಂಕರ್, ಜಾಗತಿಕ ದಕ್ಷಿಣ ರಾಷ್ಟ್ರಗಳಿಗೆ ಸಂಬಂಧಿಸಿದ ವಿಷಯಗಳೂ ಸೇರಿದಂತೆ ಜಾಗತಿಕ ಸವಾಲುಗಳ ಕುರಿತಾದ ತನ್ನ ದೃಷ್ಟಿಕೋನಗಳನ್ನು ಭಾರತ, ಈಗ ಹೆಚ್ಚಿನ ಆತ್ಮವಿಶ್ವಾಸದಿಂದ ವ್ಯಕ್ತಪಡಿಸುತ್ತಿದೆ. ದೇಶದ ಹಿತಾಸಕ್ತಿಗಳು ಜಾಗತಿಕ ಮಟ್ಟದಲ್ಲಿ ವಿಸ್ತರಿಸಿವೆ. ಜವಾಬ್ದಾರಿಗಳು ಹೆಚ್ಚಿವೆ ಮತ್ತು ಅದಕ್ಕೆ ಅನುಗುಣವಾಗಿ ಭಾರತದ ಮೇಲಿನ ನಿರೀಕ್ಷೆಗಳೂ ಅಧಿಕವಾಗಿವೆ ಎಂದು ಹೇಳಿದ್ದಾರೆ.

<><><>

ಯಮುನಾ ನದಿಯ ಪುನರುಜ್ಜೀವನಕ್ಕಾಗಿ ಉತ್ತರಪ್ರದೇಶ, ಉತ್ತರಾಖಂಡ್, ಹಿಮಾಚಲಪ್ರದೇಶ, ಹರಿಯಾಣ, ರಾಜಸ್ಥಾನ ಮತ್ತು ದೆಹಲಿಯ ಮುಖ್ಯಮಂತ್ರಿಗಳು ಇಂದು ಕಿಶೌ ಬಹುಪಯೋಗಿ ಅಣೆಕಟ್ಟು ಯೋಜನೆ ಸಂಬಂಧಿತ ಒಪ್ಪಂದಕ್ಕೆ ಸಹಿ ಹಾಕಿದ್ದಾರೆ. ನವದೆಹಲಿಯಲ್ಲಿಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರ ಸಮ್ಮುಖದಲ್ಲಿ ಈ ಒಪ್ಪಂದಕ್ಕೆ ಸಹಿ ಹಾಕಲಾಯಿತು. ಈ ಸಂದರ್ಭದಲ್ಲಿ ಕೇಂದ್ರ ಜಲಶಕ್ತಿ ಸಚಿವ ಸಿ.ಆರ್.ಪಾಟೀಲ್ ಸೇರಿದಂತೆ ಉನ್ನತ ಅಧಿಕಾರಿಗಳು ಉಪಸ್ಥಿತರಿದ್ದರು.

ಕಿಶೌ ಬಹುಪಯೋಗಿ ಅಣೆಕಟ್ಟು ಯೋಜನೆಯ ಜಲ ಸಂಬಂಧಿತ ಘಟಕದ ವೆಚ್ಚದ ಶೇಕಡ ೯೦ರಷ್ಟನ್ನು ಕೇಂದ್ರ ಸರ್ಕಾರ ಹಾಗೂ ಉಳಿದ ಶೇಕಡ ೧೦ರಷ್ಟು ಆರ್ಥಿಕ ಹೊರೆಯನ್ನು, ಯೋಜನೆಯಲ್ಲಿ ಪಾಲ್ಗೊಳ್ಳುವ ೬ ರಾಜ್ಯಗಳು ಹಂಚಿಕೊಳ್ಳಲಿವೆ.

<><><>

ಹೊಸ ನೇಮಕಾತಿಗಳು ನಡೆಯುವವರೆಗೆ, ನಿವೃತ್ತರಾಗುತ್ತಿರುವ ನ್ಯಾಯಮಂಡಳಿಗಳ ಅಧ್ಯಕ್ಷರು ಮತ್ತು ಸದಸ್ಯರ ಅಧಿಕಾರಾವಧಿಯನ್ನು ಒಂದು ತಿಂಗಳ ಅವಧಿಗೆ ವಿಸ್ತರಿಸುವ ಕುರಿತು ಪರಿಶೀಲಿಸುವಂತೆ ಸುಪ್ರೀಂ ಕೋರ್ಟ್ ಇಂದು ಕೇಂದ್ರ ಸರ್ಕಾರಕ್ಕೆ ಸೂಚಿಸಿದೆ. ಹುದ್ದೆಗಳು ಖಾಲಿಯಿರುವ ಕಾರಣದಿಂದಾಗಿ ನ್ಯಾಯಮಂಡಳಿಗಳು ನಿಷ್ಕ್ರಿಯವಾಗಬಾರದು ಎಂದು ಸರ್ವೋಚ್ಚ ನ್ಯಾಯಾಲಯ ಅಭಿಪ್ರಾಯಪಟ್ಟಿದೆ. ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್ ಹಾಗೂ ನ್ಯಾಯಮೂರ್ತಿಗಳಾದ ಜಾಯ್‌ಮಲ್ಯ ಬಾಗ್ಚಿ ಹಾಗೂ ವಿ.ಮೋಹನಾ ಅವರನ್ನೊಳಗೊಂಡ ನ್ಯಾಯಪೀಠದ ಮುಂದೆ ಅಟಾರ್ನಿ ಜನರಲ್ ಆರ್.ವೆಂಕಟರಮಣಿ ಅವರ ಮೂಲಕ ಕೇಂದ್ರ ಸರ್ಕಾರ ತನ್ನ ನಿಲುವು ಮಂಡಿಸಿತು. ಹೊಸ ನೇಮಕಾತಿ ಪ್ರಕ್ರಿಯೆ ಈಗಾಗಲೇ ಆರಂಭಗೊಂಡಿರುವುದರಿಂದ ತಾತ್ಕಾಲಿಕ ವಿಸ್ತರಣೆಗಾಗಿ ಸಲ್ಲಿಸಲಾದ ಇಂತಹ ಮನವಿಗಳನ್ನು ಪರಿಗಣಿಸಬಾರದು ಎಂದು ಸರ್ಕಾರ ಕೋರಿತು. ನ್ಯಾಯಾಧೀಕರಣ ಸುಧಾರಣಾ ಕಾಯ್ದೆ-೨೦೨೬ರ ಅಡಿಯಲ್ಲಿ ವಿವಿಧ ನ್ಯಾಯಮಂಡಳಿಗಳ ೨೪೮ ಸದಸ್ಯರು ಅಧಿಕಾರಾವಧಿ ವಿಸ್ತರಣೆಗೆ ಅರ್ಹರೆಂದು ಗುರುತಿಸಲಾಗಿದೆ ಮತ್ತು ಅವರ ಸೇವೆಯನ್ನು ವಿಸ್ತರಿಸಲಾಗುತ್ತಿದೆ ಎಂದು ಕೇಂದ್ರ ಸರ್ಕಾರ, ಇದೇ ತಿಂಗಳ ೮ ರಂದು ನ್ಯಾಯಪೀಠಕ್ಕೆ ಮಾಹಿತಿ ನೀಡಿತ್ತು.

<><><>

ಜೆಪಿಎಸ್‌ಸಿ ನಾಗರಿಕ ಸೇವೆಗಳ ಪರೀಕ್ಷೆ ಮತ್ತು ಸಿಡಿಪಿಒ, ಎಫ್‌ಎಸ್‌ಒ ಮತ್ತು ಜೆಎಸ್‌ಎಸ್‌ಸಿ-ಸಿಜಿಎಲ್ ಪರೀಕ್ಷೆಗಳ ಆಧಾರದ ಮೇಲೆ ಮಾಡಿರುವ ನೇಮಕಾತಿಗಳನ್ನು ರದ್ದುಗೊಳಿಸುವ ಜಾರ್ಖಂಡ್ ಸರ್ಕಾರದ ನಿರ್ಧಾರದ ಮೇಲಿನ ತಡೆಯಾಜ್ಞೆಯನ್ನು ಜಾರ್ಖಂಡ್ ಹೈಕೋರ್ಟ್ ಇಂದು ಮುಂದುವರೆಸಿದೆ. ಸಿಐಡಿ ತನಿಖೆಯ ಸ್ಥಿತಿಗತಿಯನ್ನು ಸ್ಪಷ್ಟಪಡಿಸಿ ೪೮ ಗಂಟೆಗಳ ಒಳಗೆ ಪ್ರತಿಕ್ರಿಯೆ ಸಲ್ಲಿಸುವಂತೆ ನ್ಯಾಯಮೂರ್ತಿ ದೀಪಕ್ ರೋಷನ್, ಜಾರ್ಖಂಡ್ ಸರ್ಕಾರಕ್ಕೆ ಸೂಚಿಸಿದ್ದಾರೆ. ಸರ್ಕಾರವು ತನ್ನ ಪ್ರತಿಕ್ರಿಯೆಯನ್ನು ಸಲ್ಲಿಸಲು ಒಂದು ವಾರದ ಸಮಯವನ್ನು ಕೇಳಿದೆ. ಆದರೆ ಈ ವಿಷಯವು ಹೆಚ್ಚಿನ ಸಂಖ್ಯೆಯ ಅಭ್ಯರ್ಥಿಗಳು ಮತ್ತು ನೇಮಕಗೊಂಡ ಸಿಬ್ಬಂದಿಗಳ ಭವಿಷ್ಯಕ್ಕೆ ಸಂಬಂಧಿಸಿದೆ. ಅನಗತ್ಯ ವಿಳಂಬ ಮಾಡಬಾರದು ಎಂದು ನ್ಯಾಯಾಲಯ ಹೇಳಿದೆ. ಪ್ರಕರಣದ ಮುಂದಿನ ವಿಚಾರಣೆ ಇದೇ ೧೮ ರಂದು ನಡೆಯಲಿದೆ.

<><><>

ಭಾರತ-ಅಮೆರಿಕ ನಡುವಿನ ೨೨ನೇ ಜಂಟಿ ಸಮರಾಭ್ಯಾಸ 'ಯುದ್ಧ್ ಅಭ್ಯಾಸ್' ಉತ್ತರಾಖಂಡದಲ್ಲಿ ಇಂದು ಆರಂಭವಾಯಿತು. ಗುಡ್ಡಗಾಡು ಮತ್ತು ಅರೆಗುಡ್ಡಗಾಡು ಪ್ರದೇಶಗಳಲ್ಲಿ ಪರಸ್ಪರ ಸೇನಾ ಸಾಮರ್ಥ್ಯ ವೃದ್ಧಿಸುವ ದಿಸೆಯಲ್ಲಿ ಈ ಸಮರಾಭ್ಯಾಸ ನಡೆಸಲಾಗುತ್ತದೆ ಎಂದು ರಕ್ಷಣಾ ಸಚಿವಾಲಯ ತಿಳಿಸಿದೆ. ಡ್ರೋನ್ ಮತ್ತು ಸ್ವಯಂ ಚಾಲಿತ ಕಣ್ಗಾವಲು ವ್ಯವಸ್ಥೆಯನ್ನು ಯೋಜಿಸುವ ನಿಟ್ಟಿನಲ್ಲಿ ಈ ತರಬೇತಿ ನಡೆಯುತ್ತಿದೆ. ಎರಡೂ ದೇಶಗಳ ರಕ್ಷಣಾ ತಜ್ಞರು, ಪರಸ್ಪರ ಮಾಹಿತಿ ಮತ್ತು ತಂತ್ರಜ್ಞಾನಗಳ ಬಗ್ಗೆ ತಮ್ಮ ಅಭಿಪ್ರಾಯಗಳನ್ನು ಹಂಚಿಕೊಳ್ಳಲಿದ್ದಾರೆ.

<><><><>

ಭಾರತ ವಿಶ್ವದ ಅತಿದೊಡ್ಡ ಪ್ರಜಾಪ್ರಭುತ್ವವಾಗಿದ್ದು, ಇದು ಭಾಗವಹಿಸುವಿಕೆ, ಸಂವಾದ, ಸಮಾನತೆ ಮತ್ತು ಸಾಂವಿಧಾನಿಕ ಮೌಲ್ಯಗಳ ತತ್ವಗಳ ಮೇಲೆ ದೃಢವಾಗಿ ನಿಂತಿದೆ ಎಂದು ಕೇಂದ್ರ ಸಂಸದೀಯ ವ್ಯವಹಾರಗಳ ಸಚಿವ ಕಿರಣ್ ರಿಜಿಜು ಅಭಿಪ್ರಾಯಪಟ್ಟಿದ್ದಾರೆ. ಅಂತಾರಾಷ್ಟ್ರೀಯ ಪ್ರಜಾಪ್ರಭುತ್ವದ ದಿನದ ಅಂಗವಾಗಿ ಸಾಮಾಜಿಕ ಜಾಲತಾಣದಲ್ಲಿ ಅವರು, ಪ್ರತಿಯೊಬ್ಬ ನಾಗರಿಕನಿಗೂ ಧ್ವನಿ ನೀಡುವ ಪ್ರಜಾಪ್ರಭುತ್ವದ ಸ್ಫೂರ್ತಿಯನ್ನು ನಾಗರಿಕರು ಸಂಭ್ರಮಿಸಬೇಕು. ಅಲ್ಲದೇ, ಮುಂದಿನ ಪೀಳಿಗೆಗಾಗಿ ದೇಶದ ಪ್ರಜಾಪ್ರಭುತ್ವವನ್ನು ಬಲಪಡಿಸುವಂತೆ ಅವರು ಜನರಿಗೆ ಕರೆ ನೀಡಿದರು.

<><><><>

ಏಡ್ಸ್ ಚಿಕಿತ್ಸೆಗಾಗಿ ಬೋಟ್ಸ್‌ವಾನಾದ ಸಾರ್ವಜನಿಕ ಆರೋಗ್ಯ ವ್ಯವಸ್ಥೆಗೆ ಬೆಂಬಲ ನೀಡುವ ನಿಟ್ಟಿನಲ್ಲಿ, ಭಾರತ ಇಂದು ಅಲ್ಲಿಗೆ ೧೦ ಟನ್ ಆಂಟಿ-ರೆಟ್ರೊವೈರಲ್ ಔಷಧಗಳನ್ನು ಕಳುಹಿಸಿದೆ. ಜಾಗತಿಕ ದಕ್ಷಿಣ ಪಾಲುದಾರ ರಾಷ್ಟ್ರಗಳೊಂದಿಗೆ ಆರೋಗ್ಯ ಸಹಕಾರ ಬಲಪಡಿಸುವ ತನ್ನ ಬದ್ಧತೆಯನ್ನು ಈ ಕ್ರಮ ಪುನರುಚ್ಚರಿಸಿದೆ ಎಂದು ಸಾಮಾಜಿಕ ಜಾಲತಾಣದಲ್ಲಿ ವಿದೇಶಾಂಗ ವ್ಯವಹಾರಗಳ ಸಚಿವ ಡಾ.ಎಸ್.ಜೈಶಂಕರ್ ತಿಳಿಸಿದ್ದಾರೆ.

<><><><>

೨೦೪೭ರ ವೇಳೆಗೆ ಅಭಿವೃದ್ಧಿ ಹೊಂದಿದ ದೇಶವಾಗಲು ದೇಶವನ್ನು ಕಟ್ಟುವ ದೆಸೆಯಿಂದ ಕ್ರೀಡಾಭಿವೃದ್ಧಿ ಅತ್ಯಂತ ಮಹತ್ವದ್ದು ಎಂದು ಕೇಂದ್ರ ಯುವ ವ್ಯವಹಾರ ಹಾಗೂ ಕ್ರೀಡಾ ಸಚಿವಾಲಯದ ರಾಜ್ಯ ಸಚಿವ ರಕ್ಷಾ ನಿಖಿಲ್ ಖಡ್ಸೆ ಹೇಳಿದ್ದಾರೆ. ಮೂರು ದಿನಗಳ ಮಿಜೋರಾಂ ಪ್ರವಾಸದಲ್ಲಿರುವ ಕೇಂದ್ರ ಸಚಿವರು, ಮಿಜೋರಾಂ ಕ್ರೀಡಾ ಸಚಿವ ಲ್ಯಾಂಗಿನ್‌ಗ್ಲೋವಾ ಹಮರ್ ಅವರನ್ನು ಭೇಟಿ ಮಾಡಿದ ಸಂದರ್ಭದಲ್ಲಿ ಆಕಾಶವಾಣಿಯೊಂದಿಗೆ ಮಾತನಾಡಿದರು.

<><><><>

ಅಮೆರಿಕದಲ್ಲಿ ವಿದೇಶಿ ವಿದ್ಯಾರ್ಥಿಗಳು ಮತ್ತು ಪತ್ರಕರ್ತರಿಗೆ ಇಂತಿಷ್ಟೇ ಕಾಲ ಉಳಿಯಬಹುದು ಎಂಬ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಆಡಳಿತ ಹೊರಡಿಸಿದ್ದ ನಿಯಮಗಳಿಗೆ ಅಲ್ಲಿನ ಒಕ್ಕೂಟ ನ್ಯಾಯಾಲಯ ತಡೆ ಒಡ್ಡಿದೆ. ಮೆಸ್ಯಾಚ್ಯುಯೆಟ್ಸ್ ಜಿಲ್ಲಾ ನ್ಯಾಯಾಧೀಶರ ಈ ತಡೆಯಾಜ್ಞೆ, ಅಂತಾರಾಷ್ಟ್ರೀಯ ವಿದ್ಯಾರ್ಥಿಗಳಿಗೆ ನಿರಾಳತೆ ತಂದಿದೆ. ಇಂತಹ ನಿರ್ಧಾರಗಳು ಅಮೆರಿಕದ ಆರ್ಥಿಕತೆ ಮತ್ತು ಉನ್ನತ ಶಿಕ್ಷಣ ವ್ಯವಸ್ಥೆಯನ್ನು ಉಸಿರು ಕಟ್ಟಿಸುತ್ತವೆ ಎಂದು ನ್ಯಾಯಾಲಯ ಅಭಿಪ್ರಾಯಪಟ್ಟಿದೆ. ಕಳೆದ ಜುಲೈನಲ್ಲಿ ಟ್ರಂಪ್ ಆಡಳಿತ ಹೊರಡಿಸಿದ ನಿಯಮಗಳ ಪ್ರಕಾರ, ವಿದೇಶಿ ವಿದ್ಯಾರ್ಥಿಗಳು ಅಮೆರಿಕ ನೆಲೆಯಲ್ಲಿ ನಾಲ್ಕು ವರ್ಷಗಳ ಕಾಲ ಮತ್ತು ಪತ್ರಕರ್ತರು ಗರಿಷ್ಠ ೨೪೦ ದಿನಗಳ ಕಾಲ ಮಾತ್ರ ಇರಬಹುದು ಎಂದು ಹೇಳಿತ್ತು. ಜೊತೆಗೆ ಚೀನಾದ ಪತ್ರಕರ್ತರಿಗೆ ೯೦ ದಿನಗಳ ಕಾಲಮಿತಿ ಮಾತ್ರ ನೀಡಿತ್ತು.

<><><><>

ದೆಹಲಿಯ ಅರುಣ್ ಜೇಟ್ಲಿ ಕ್ರೀಡಾಂಗಣದಲ್ಲಿ ಇಂದು ನಡೆಯುತ್ತಿರುವ ಪುರುಷರ ಎರಡನೇ ಟಿ-೨೦ ಕ್ರಿಕೆಟ್ ಪಂದ್ಯದಲ್ಲಿ ಭಾರತ ಮತ್ತು ಅಫ್ಘಾನಿಸ್ತಾನ ತಂಡಗಳು ಮುಖಾಮುಖಿಯಾಗಿವೆ. ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡುತ್ತಿರುವ ಅಫ್ಘಾನಿಸ್ತಾನ, ಇತ್ತೀಚಿನ ವರದಿ ಬಂದಾಗ, ೨.೪ ಓವರ್‌ಗಳಲ್ಲಿ ೧ ವಿಕೆಟ್ ನಷ್ಟಕ್ಕೆ ೧೧ ರನ್ ಮಾಡಿ ಆಡುತ್ತಿದೆ. ಮೂರು ಪಂದ್ಯಗಳ ಸರಣಿಯಲ್ಲಿ ಭಾರತ ೧-೦ ಮುನ್ನಡೆಯಲ್ಲಿದೆ. ಸರಣಿಯ ಮೂರನೇ ಪಂದ್ಯ ಇದೇ ೧೭ ರಂದು ನಡೆಯಲಿದೆ.

<><> ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು <><>